ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 08 ಎಸ್‌ಆರ್‌ಪಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 04.04.2020.

## ಸುತ್ತೋಲೆ

ವಿಷಯ: COVID-19 ಕೊರೊನ ವೈರಸ್ ಸೋಂಕು ರೋಗದ ಹತೋಟಿಗಾಗಿ ಸರ್ಕಾರಿ ಅಧಿಕಾರಿ/ನೌಕರರ ವೇತನವನ್ನು ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ದೇಣಿಗೆ ನೀಡುವ ಬಗ್ಗೆ ಸ್ಪಷ್ಟೀಕರಣ ನೀಡುವ ಕುರಿತು.

ಉಲ್ಲೇಖ:
1. ದಿನಾಂಕ: 01.04.2020ರ ಸರ್ಕಾರಿ ಆದೇಶ ಸಂಖ್ಯೆ: ಆಇ 8 ಎಸ್‌ಆರ್‌ಪಿ 2020.
2. ದಿನಾಂಕ: 03.04.2020ರ ತಿದ್ದುಪಡಿ ಆದೇಶ ಸಂ: ಆಇ 8 ಎಸ್‌ಆರ್‌ಪಿ 2020

*****

ಕರ್ನಾಟಕ ರಾಜ್ಯದಲ್ಲಿ ಹರಡುತ್ತಿರುವ COVID-19 ಕೊರೊನ ವೈರಸ್ ಸೋಂಕು ರೋಗದ ಹತೋಟಿಗಾಗಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಒಂದು ದಿನದ ವೇತನವನ್ನು ದೇಣಿಗೆ ನೀಡಲಿಚ್ಛಿಸುವ ರಾಜ್ಯ ಸರ್ಕಾರಿ ನೌಕರರ 2020ರ ಮಾರ್ಚ್ ತಿಂಗಳ ವೇತನದಿಂದ ವೇತನದಿಂದ ಒಂದು ದಿನದ ಸಂಬಳವನ್ನು ಕಟಾವು ಮಾಡಿ ಅದನ್ನು ಲೆಕ್ಕ ಶೀರ್ಷಿಕೆ 8449-00-120-0-xx-697 Fund to combat COVID-19 ಗೆ ಜಮೆ ಮಾಡಿ, ಅದರ ಕ್ರೋಢೀಕೃತ ಚೆಕ್‌ನ್ನು, **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ), ವಿಧಾನ ಸೌಧ ಶಾಖೆಯ ಮುಖ್ಯಮಂತ್ರಿಗಳ ಪರಿಹಾರನಿಧಿ ಕೋವಿಡ್-19, ಖಾತೆ ಸಂಖ್ಯೆ: 39234923151ಗೆ** ಜಮಾ ಮಾಡಲು, ಮುಖ್ಯ ಮಂತ್ರಿಯವರ ಜಂಟಿಕಾರ್ಯದರ್ಶಿ(ಪರಿಹಾರನಿಧಿ), ಕೊಠಡಿ ಸಂ:235 'ಎ', ವಿಧಾನಸೌಧ, ಬೆಂಗಳೂರು –560001 ಇಲ್ಲಿಗೆ ಕಳುಹಿಸುವ ಸಂಬಂಧ, ಉಲ್ಲೇಖ (1)ರ ದಿನಾಂಕ: 01.04.2020ರ ಸರ್ಕಾರಿ ಆದೇಶದಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

COVID-19 ಕೊರೊನ ವೈರಸ್ ಸೋಂಕು ರೋಗದ ಹತೋಟಿಗಾಗಿ ರಾಜ್ಯ ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳಿಗೆ ಒಂದು ದಿವಸಕ್ಕೂ ಮೇಲ್ಪಟ್ಟ ಸಂಬಳವನ್ನು ನೀಡಲು ಇಚ್ಛಿಸುವ ಅಧಿಕಾರಿ/ನೌಕರರ ಮಾರ್ಚ್ 2020ರ ತಿಂಗಳಿನ ವೇತನದಲ್ಲಿ 02 ಮತ್ತು ಅದಕ್ಕೂ ಹೆಚ್ಚಿನ ದಿವಸದ

ಸಂಬಳವನ್ನು ಕಟಾವು ಮಾಡಲು ಸೂಕ್ತ ಆದೇಶ ಹೊರಡಿಸುವಂತೆ, ಕೆಲವು ಅಧಿಕಾರಿ/ನೌಕರರ ಸಂಘಟನೆಗಳು ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತವೆ.

ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ದೇಣಿಗೆ ನೀಡುವುದು ಸಂಬಂಧಿಸಿದ ಅಧಿಕಾರಿ /ನೌಕರರ ವೈಯಕ್ತಿಕ ನಿರ್ಧಾರಕ್ಕೆ ಸಂಬಂಧಿಸಿದ ವಿಷಯವಾಗಿರುತ್ತದೆ. ಆದುದರಿಂದ, ಕೊರೊನ ವೈರಸ್ ಸೋಂಕು ರೋಗದ ಹತೋಟಿಗಾಗಿ ಮಾರ್ಚ್ 2020 ರ ತಿಂಗಳಿನ ವೇತನದಲ್ಲಾಗಲೀ ಅಥವಾ ನಂತರದ ಮಾಹೆಯ ವೇತನದಲ್ಲಾಗಲೀ ಒಂದು ಅಥವಾ ಹೆಚ್ಚಿನ ದಿನಗಳ ವೇತನವನ್ನು ನೀಡಲು ಇಚ್ಛಿಸುವ ಅಧಿಕಾರಿ/ನೌಕರರು, ಈ ಬಗ್ಗೆ ತಮ್ಮ ಸ್ಪಷ್ಟ ಅಭಿಮತವನ್ನು ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿ/ ಸಕ್ಷಮ ಪ್ರಾಧಿಕಾರಿ/ಮಹಾಲೇಖಪಾಲರು ಇವರಿಗೆ ಸಲ್ಲಿಸಬಹುದು. ಹೀಗೆ ಒಮ್ಮೆ ಸಲ್ಲಿಸಿದ ಅಭಿಮತವನ್ನು ಯಾವುದೇ ಕಾರಣಕ್ಕೂ ಹಿಂಪಡೆಯಲು ಅವಕಾಶವಿರುವುದಿಲ್ಲ.

ಎರಡು ಮತ್ತು ಹೆಚ್ಚಿನ ದಿನಗಳ ವೇತನ ಕಟಾವು ಮಾಡಲು, ನೌಕರರು ಮತ್ತು ಅಧಿಕಾರಿಗಳಿಂದ ಸ್ವೀಕೃತವಾಗುವ ಮನವಿಯನ್ನು ಪರಿಶಿಲಿಸಿದ ಬಳಿಕ ಸಂಬಂಧಿಸಿದ ವೇತನ ಬಟವಾಡೆ ಅಧಕಾರಿ/ ಸಕ್ಷಮ ಪ್ರಾಧಿಕಾರಿ/ಮಹಾಲೇಖಪಾಲರು ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಅಧಿಕಾರ ಪಡೆದಿರುತ್ತಾರೆ.

ವೇತನ ಕಟಾವು ಸಂಬಂಧ ಸ್ವೀಕೃತವಾಗುವ ಕೋರಿಕೆಗಳನ್ನು ಪರಿಗಣಿಸಿ ಈ ಬಗ್ಗೆ HRMS ತಂತ್ರಾಂಶದಲ್ಲಿ ಸೂಕ್ತ ಅವಕಾಶ ಕಲ್ಪಿಸಲು ಸಂಬಂಧಿಸಿದ ಪ್ರಾಧಿಕಾರಿಯು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ. HRMS ತಂತ್ರಾಂಶ ಪದ್ಧತಿಯನ್ನು ಅಳವಡಿಸಿಕೊಳ್ಳದ ಪ್ರಕರಣಗಳಲ್ಲಿಯೂ ಸಹ ಅಧಿಕಾರಿ/ನೌಕರರ ಎರಡು ಮತ್ತು ಹೆಚ್ಚಿನ ದಿನಗಳ ಸಂಬಳವನ್ನು ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಪಾವತಿಸಲು, ಉಲ್ಲೇಖ (1)ರ ಆದೇಶದಲ್ಲಿನ ಮಾರ್ಗಸೂಚಿಗಳನ್ನೇ ಪಾಲಿಸುವುದು.

ಮುಖ್ಯ ಮಂತ್ರಿಗಳ ಪರಿಹಾರನಿಧಿಗೆ ಸಂದಾಯವಾಗುವ ಮೊತ್ತವು ಆದಾಯ ತೆರಿಗೆಯ ಅಧಿನಿಯಮ, 1961ರ ಪ್ರಕರಣ **80(G)**ಯಡಿ ಶೇಕಡ 100ರಷ್ಟು ಆದಾಯ ತೆರಿಗೆಯಿಂದ ವಿನಾಯಿತಿಗೆ ಒಳಪಡುತ್ತದೆ.

ಸರ್ಕಾರದ ಈ ಸ್ಪಷ್ಟೀಕರಣವನ್ನು ಎಲ್ಲಾ ಅಧಿಕಾರಿ/ನೌಕರರ ಗಮನಕ್ಕೆ ತರುವಂತೆ ಸಂಬಂಧಿಸಿದ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ/ಇಲಾಖಾ ಮುಖ್ಯಸ್ಥರನ್ನು ಕೋರಿದೆ.

(ಡಾ:ಪಿ.ಸಿ.ಜಾಫರ್)
ಸರ್ಕಾರದ ಕಾರ್ಯದರ್ಶಿ(ವೆಚ್ಚ)
ಆರ್ಥಿಕ ಇಲಾಖೆ

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 50 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.
2. ಪ್ರಧಾನ ಮಹಾಲೇಖಪಾಲರು (G&SSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ. ನಂ.5398) ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (E&RSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ. ನಂ.5398) ಬೆಂಗಳೂರು.
4. ಪ್ರಧಾನ ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಪಾರ್ಕ್‌ಹೌಸ್‌ರಸ್ತೆ, (ಪಿ.ಬಿ. ನಂ.5329) ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
6. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು.
7. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬಹುಮಹಡಿಕಟ್ಟಡ, ಬೆಂಗಳೂರು.
8. ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಬೆಂಗಳೂರು.
9. ಎಲ್ಲಾ ಪ್ರಾದೇಶಿಕ ಆಯುಕ್ತರು.
10. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
11. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು, ವಿಧಾನಸೌಧ, ಬೆಂಗಳೂರು.
12. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.
13. ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಉಪ ಕುಲಪತಿಗಳು/ರಿಜಿಸ್ಟ್ರಾರ್‌ಗಳು.
14. ಎಲ್ಲಾ ಜಿಲ್ಲೆಗಳ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು.
15. ಎಲ್ಲಾ ಇಲಾಖಾ ಮುಖ್ಯಸ್ಥರು/ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
16. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
17. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
18. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸ ಸೌಧ, ಬೆಂಗಳೂರು.
19. ಪ್ರಾಜೆಕ್ಟ್‌ಆಫೀಸರ್, ಹೆಚ್.ಆರ್.ಎಂ.ಎಸ್., ಕೊಠಡಿ ಸಂಖ್ಯೆ:145'A', ಬಹುಮಹಡಿಗಳ ಕಟ್ಟಡ, ಬೆಂಗಳೂರು.
20. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
21. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
22. ವಾರಪತ್ರ/ಶಾಖೆಯ ರಕ್ಷಾ ಕಡತ.

**ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಕೃತ ಅಂತರ್ಜಾಲತಾಣ www.finance.karnataka.gov.in ವೀಕ್ಷಿಸಿ.**